# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು-560 002

ದಿನಾಂಕ:20.01.2020

## ಪತ್ರಿಕಾ ಪ್ರಕಟಣೆ

## ಜವಹಾರ್ ಲಾಲ್ ನೆಹರು ತಾರಾಲಯ ಅಭಿವೃದ್ಧಿಗೆ ಸ್ಥಳ ತಪಾಸಣೆ: ಮಾನ್ಯ ಆಯುಕ್ತರು ರವರಿಂದ




ಮಾನ್ಯ ಆಯುಕ್ತರು ರವರ ನೇತೃತ್ವದಲ್ಲಿ ಇಂದು ಜವಹಾರ್ ಲಾಲ್ ನೆಹರು ತಾರಾಲಯದಲ್ಲಿ ವಿನೂತನ ಮಾದರಿಯಲ್ಲಿ ಸಭಾಂಗಣ ನಿರ್ಮಿಸುವ ಸಂಬಂಧ ಇಂದು ಸ್ಥಳ ತಪಾಸಣೆ ನಡೆಸಲಾಯಿತು. ಈ ವೇಳೆ ಬೆಂಗಳೂರು ಸ್ಮಾರ್ಟ್ ಸಿಟಿ ಲಿ. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀಮತಿ ಹೆಪ್ಸಿಬಾ ರಾಣಿ ಕೊರ್ಲಪಾಟಿ, ಮುಖ್ಯ ಅಭಿಯಂತರರು ಶ್ರೀ ಶ್ರೀನಿವಾಸ್, ವಾಸ್ತುಶಿಲ್ಪಿಗಳು ಹಾಗೂ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಬೆಂಗಳೂರು ಸ್ಮಾರ್ಟ್ ಸಿಟಿ ಲಿ. ಅಡಿ ಜವಹಾರ್ ಲಾಲ್ ನೆಹರು ತಾರಾಲಯವನ್ನು 20 ಕೋಟಿ ರೂ. ವೆಚ್ಚದಲ್ಲಿ ವಿನೂತನ ಮಾದರಿಯ ಸಭಾಂಗಣವನ್ನು ನಿರ್ಮಿಸಲು ಯೋಜನೆ ರೂಪಿಸಲಾಗಿದೆ. 600 ಜನರು ಕುಳಿತುಕೊಳ್ಳುವ ಸಾಮರ್ಥ್ಯ ಮತ್ತು ಒಟ್ಟು 40,350 ಚದರ ಅಡಿ ವಿಸ್ತೀರ್ಣದ ಆಧುನಿಕ, ಸುಸಜ್ಜಿತ ಕಟ್ಟಡವನ್ನು ಅಭಿವೃದ್ಧಿಪಡಿಸುವ ಉದ್ದೇಶವನ್ನು ಹೊಂದಲಾಗಿದೆ. ಕಟ್ಟಡದಲ್ಲಿ 4 ಉಪನ್ಯಾಸ ಸಭಾಂಗಣಗಳು, ವಿಶ್ರಾಂತಿ ಕೊಠಡಿ, ಶೌಚಾಲಯ ವ್ಯವಸ್ಥೆ, ಅತಿಥಿ ಗಣ್ಯರುಗಳಿಗೆ ಕಾಯುವ ಕೋಣೆ, ನೆಲಮಹಡಿಯಲ್ಲಿ ಪಾರ್ಕಿಂಗ್ ಸೌಲಭ್ಯ ಸೇರಿದಂತೆ ಇನ್ನಿತರ ಸೌಲಭ್ಯಗಳನ್ನು ಕಲ್ಪಿಸಲಾಗುತ್ತದೆ. ನೂತನ ಕಟ್ಟಡದಲ್ಲಿ ಸಂಗೀತ, ನಾಟಕ, ಸೆಮಿನಾರ್‌ಗಳು ಸೇರಿದಂತೆ ಇನ್ನಿತರ ಪ್ರದರ್ಶನಕ್ಕಾಗಿ ಸಭಾಂಗಣಗಳನ್ನು ಬಳಸಬಹುದಾಗಿರುತ್ತದೆ. ಇದರಿಂದಾಗಿ ನಗರದಲ್ಲಿ ಉನ್ನತ ಮಟ್ಟದ ಸೌಲಭ್ಯಗಳುಳ್ಳ ವೈಜ್ಞಾನಿಕ ಕಟ್ಟಡ ನಿರ್ಮಾಣವಾಗಲಿದೆ.

ತದನಂತರ ಸಭೆ ನಡೆಸಿದ ಆಯುಕ್ತರು, ಕೇಂದ್ರ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ(Ministry of Housing and Urban Affairs-MoHUA)ವು ದೇಶದಲ್ಲಿನ ನಗರಗಳ ಸುಲಲಿತ ಜೀವನ ಮಟ್ಟ ಕುರಿತು ಸಮೀಕ್ಷೆ ಆರಂಭಿಸಿದೆ. ಸಾರ್ವಜನಿಕ ಈ ಸಮೀಕ್ಷೆಯಲ್ಲಿ ಪಾಲ್ಗೊಳ್ಳುವ ಕುರಿತು ಮಾಹಿತಿ ಪೋಸ್ಟರ್ ಗಳನ್ನು ಇಂದು ಬಿಡುಗಡೆ ಮಾಡಲಾಯಿತು. ಬೆಂಗಳೂರು ನಾಗರೀಕರು EaseofLiving2019 ಸಮೀಕ್ಷೆಯಲ್ಲಿ ಭಾಗವಹಿಸಿ ನಮ್ಮ ಬೆಂಗಳೂರು ಉತ್ತಮ ಶ್ರೇಣಿ ಪಡೆಯಲು ಸಹಕರಿಸಬೇಕಿದ್ದು,bit.ly/39DH2rdಲಿಂಕ್ ಗೆ ಭೇಟಿ ನೀಡಿಸಮೀಕ್ಷೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ಸಲ್ಲಿಸುವಂತೆ ಕೋರಿದರು.

**ಈ ವಿಷಯವನ್ನು ತಮ್ಮ ಮಾಧ್ಯಮದಲ್ಲಿ ಪ್ರಕಟಿಸಲು ಕೋರಿದೆ.**

**ಸಾರ್ವಜನಿಕ ಸಂಪರ್ಕಾಧಿಕಾರಿ**